ಕರ್ನಾಟಕ ಸರ್ಕಾರ

ಸಂ: ಆಇ 81 ವೆಚ್ಚ6/2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:07/02/2018.

# ಸುತ್ತೋಲೆ

ವಿಷಯ: ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ನಿಧಿ-1ರಲ್ಲಿ ವೆಚ್ಚವಾಗದ ಅನುದಾನವನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಉಪಯೋಗಿಸುವ ಬಗ್ಗೆ –

ಉಲ್ಲೇಖ: ಸುತ್ತೋಲೆ ಸಂಖ್ಯೆ: ಆಇ 350 ವೆಚ್ಚ 6/2014 ದಿನಾಂಕ:23.12.2014

********

ಆರ್ಥಿಕ ಇಲಾಖೆ ವೆಚ್ಚ 6 ಶಾಖೆಯಿಂದ ಹೊರಡಿಸಲಾಗಿದ್ದ ಸುತ್ತೋಲೆ ಸಂಖ್ಯೆ: ಆಇ 350 ವೆಚ್ಚ 6/2014, ದಿ:23/12/2014ಯನ್ನು ಉಲ್ಲೇಖಿಸಿದೆ.

ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳಡಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ಇಲಾಖೆಗಳ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ಬಟವಾಡೆಯಲ್ಲಿ ವಿಳಂಬವಾಗುತ್ತಿರುವ ಬಗ್ಗೆ ದಿ:18/12/2012ರಂದು ಸರ್ಕಾರದ ಕಾರ್ಯದರ್ಶಿಗಳು (ಆ & ಸಂ.) ರವರ ಅಧ್ಯಕ್ಷತೆಯಲ್ಲಿ ನಡೆದ ಚರ್ಚೆಯಂತೆ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರು ಅನಧಿಕೃತ ಟಿಪ್ಪಣಿ ಸಂ:ಗ್ರಾಅಪ 663 ಎಎಫ್‌ಎನ್ 2014, ದಿ:11/11/201ರ ಮೂಲಕ ಜಿಲ್ಲಾ ಪಂಚಾಯತ್ ನಿಧಿ-1ರಡಿ ಜಮೆ ಮಾಡಿಕೊಳ್ಳಲಾದ ಅನುದಾನವನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಅಂದರೆ ಏಪ್ರಿಲ್ ಮಾಹೆಯಲ್ಲಿ ಲೆಕ್ಕ ಸಮನ್ವಯ ಮಾಡಿಕೊಳ್ಳಲು ಸಾಧ್ಯವಾಗದ ಕಾರಣ ಹಾಗೂ ಲೆಕ್ಕ ಸಮನ್ವಯ ಮಾಡಿಕೊಳ್ಳಲು ಸಮಯಾವಕಾಶ ಬೇಕಾಗುವುದರಿಂದ ಲೆಕ್ಕ ಸಮನ್ವಯವನ್ನು ನಿರೀಕ್ಷಿಸಿ ವೇತನಾಂಶಕ್ಕೆ ಮಾತ್ರ ಟಿ.ಎನ್.ಎಂ.ಸಿ.ಯಲ್ಲಿ ಅಪ್‌ಲೋಡ್ ಮಾಡಲು ಪ್ರಸ್ತಾವಿಸಿರುವ ಹಿನ್ನಲೆಯಲ್ಲಿ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ನಿಧಿ-1ರಡಿ ಉಳಿಕೆಯಾದ ವೇತನದ ಬಾಬ್ತಿನ ಮೊಬಲಗನ್ನು ಪರಿಶೀಲಿಸಿ ಟಿ.ಎನ್.ಎಂ.ಸಿ.ಯಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಜೂನ್ ತಿಂಗಳ ಅಂತ್ಯದೊಳಗಾಗಿ ಲೆಕ್ಕ ಸಮನ್ವಯಗೊಳಿಸಿಕೊಳ್ಳುವಂತೆ ತಿಳಿಸಲಾಗಿತ್ತು.

ಆದರೆ, ಜೂನ್ ಮಾಹೆಯೊಳಗೆ ಲೆಕ್ಕ ಸಮನ್ವಯ ಮಾಡಿಕೊಳ್ಳಲು ಸಾಧ್ಯವಾಗದ ಕಾರಣ ಹಾಗೂ ಜೂನ್ ನಂತರ ಲೆಕ್ಕ ಸಮನ್ವಯಗೊಳಿಸಿಕೊಂಡು ನಿಧಿ-1ರಲ್ಲಿನ ಅನುದಾನವನ್ನು ವೆಚ್ಚ ಮಾಡಲು ಎನ್.ಎಂ.ಸಿ.ಗೆ ಪ್ರಸ್ತಾವನೆ ಸಲ್ಲಿಸಿದ ವೇಳೆಯಲ್ಲಿ ಮಾನ್ಯ ಮಾಡುತ್ತಿರುವುದಿಲ್ಲದ ಕಾರಣ ಕೇಂದ್ರದ ಯೋಜನೆ/ಕೇಂದ್ರ ಪುರಸ್ಕೃತ ಯೋಜನೆಯ ಕಾರ್ಯಕ್ರಮಗಳಡಿ ಬರುವ ವೇತನ/ವೇತನೇತರ/ವಿದ್ಯಾರ್ಥಿ ವೇತನ/ ಇನ್ನಿತರೆ ಮಹತ್ವದ ವೆಚ್ಚಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲದ ಕಾರಣ ಮುಂದಿನ ಆರ್ಥಿಕ ವರ್ಷದ ಲೆಕ್ಕ ಸಮನ್ವಯದೊಂದಿಗೆ ಸಲ್ಲಿಸುವ ಪ್ರಸ್ತಾವನೆಗಳನ್ನು ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರದಲ್ಲಿ ಮಾನ್ಯ ಮಾಡುವಂತೆ ಹಾಗೂ ಶಿಲ್ಕನ್ನು ಮುಂದುವರೆಸಿ ವೆಚ್ಚ ಭರಿಸಲು ಅನುವಾಗುವಂತೆ ಸೂಕ್ತ ನಿರ್ದೇಶನ ನೀಡುವಂತೆ ಅನೇಕ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ಗಳಿಂದ ಕೋರಿಕೆಗಳು ಸರ್ಕಾರದ ಆರ್ಥಿಕ ಸಚಿವಾಲಯದಲ್ಲಿ ಮೇಲಿಂದ ಮೇಲೆ ಸ್ವೀಕೃತವಾಗುತ್ತಿವೆ.

ಪ್ರಸ್ತುತ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳಿಗೆ ಬಜೆಟ್ ಕಂಟ್ರೋಲ್ ಅನ್ನು ಅಳವಡಿಸಿರುವುದರಿಂದ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳ ನಿಧಿ-1ರಡಿ ವರ್ಷಾಂತ್ಯಕ್ಕೆ ವೆಚ್ಚವಾಗದ ಅನುದಾನದ ವಿವರಗಳನ್ನು ಸಂಬಂಧಪಟ್ಟ ಜಿಲ್ಲಾ/ಉಪ ಖಜಾನೆಗಳಿಂದ ದೃಡೀಕರಿಸಿ ಮುಂದುವರಿಕೆಗೆ ಸಲ್ಲಿಸುವ ಪ್ರಸ್ತಾವನೆಗಳನ್ನು ಮಾನ್ಯ ಮಾಡಿ ಖಜಾನೆ ಗಣಕಜಾಲದ ಅಂಕಿ ಅಂಶಗಳೊಂದಿಗೆ ತಾಳೆ ಮಾಡಿ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರಕ್ಕೆ ಸಲ್ಲಿಸುವ ಪ್ರಸ್ತಾವನೆಗಳನ್ನು ಮಾನ್ಯ ಮಾಡಿ ಲಭ್ಯವಿರುವ ಅನುದಾನವನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಗಣಕಜಾಲ ನಿರ್ವಹಣಾ ಕೇಂದ್ರದಲ್ಲಿ ಮುಂದಿನ ಆರ್ಥಿಕ ವರ್ಷಕ್ಕೆ ಅನುದಾನವನ್ನು ಶಿಲ್ಕನ್ನು ಹೆಚ್ಚಿಸಿ ವೆಚ್ಚ ಮಾಡಲು ಅನುವು ಮಾಡಿಕೊಡುವ ಹಿನ್ನಲೆಯಲ್ಲಿ ಕ್ಲುಪ್ತ ವೇಳೆಯಲ್ಲಿ ಲೆಕ್ಕ ಸಮನ್ವಯ ಮಾಡಿಕೊಳ್ಳಲು ಸಾಧ್ಯವಾಗದ ಕಾರಣ ಮೇಲ್ಕಂಡ ಉಲ್ಲೇಖಿತ ಸುತ್ತೋಲೆಯಲ್ಲಿ **ಎಲ್ಲೆಲ್ಲಿ ಮುಂದಿನ ಆರ್ಥಿಕ ವರ್ಷದ ಜೂನ್ ತಿಂಗಳ ಅಂತ್ಯದವರೆಗೆ ಎಂದು ನಮೂದಾಗಿದೆಯೋ ಅದನ್ನು ಕೈಬಿಡಲಾಗಿದೆ.** ನಿಧಿ-1 ರಲ್ಲಿ ವೆಚ್ಚವಾಗದ ಅನುದಾನವನ್ನು ಉಳಿಕೆ ಅನುದಾನವನ್ನು ವೆಚ್ಚ ಮಾಡಲು ಸಲ್ಲಿಸಿದಂತಹ ಪ್ರಸ್ತಾವನೆಗಳನ್ನು ಖಜಾನೆಯಲ್ಲಿ ಸಂಚಲಿತಗೊಳಿಸಲು ಅನುವು ಮಾಡಿಕೊಡಲು ಟಿ.ಎನ್.ಎಂ.ಸಿಯು ಕ್ರಮವಹಿಸುವುದು. ಉಳಿದಂತೆ, ಮೇಲ್ಕಂಡ ಉಲ್ಲೇಖಿತ ಸುತ್ತೋಲೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**(ಪುರುಷೋತ್ತಮ್ ಸಿಂಗ್ ಬಿ.ಹೆಚ್.)**
ವಿಶೇಷಾಧಿಕಾರಿ(ಜಿ.ಪಂ.)
ಆರ್ಥಿಕ ಇಲಾಖೆ.

ಗೆ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
2) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3) ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
4) ರಾಜ್ಯ ಜಿಲ್ಲಾ ಖಜಾನೆಗಳ ಉಪ ನಿರ್ದೇಶಕರು/ಜಿಲ್ಲಾ ಖಜಾನಾಧಿಕಾರಿಗಳು
5) ಶಾಖಾಧಿಕಾರಿ, ಆರ್ಥಿಕ ಇಲಾಖೆ (ಗಣಕ ಕೋಶ)
6) ಸುತ್ತೋಲೆ ಕಡತಕ್ಕೆ
7) ಹೆಚ್ಚುವರಿ ಪ್ರತಿ